( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ07/03/2024**
**ಅಸಲು ದಾವೆ.ನಂ.203/2017**
**ಡಿ.ಡಬ್ಲ್ಯೂ2**

( ಪಾಟೀ ಸವಾಲುಃ ಶ್ರೀ. ಆರ್.ಸಿ. ವಕೀಲರು ವಾದಿ ಪರವಾಗಿ )

ನನ್ನ ಅರ್ಧಾರ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ಯಾವುದೇ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನೀವು ಎಷ್ಟನೇ ವರ್ಷದಲ್ಲಿ ಹುಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಈಗ 65 ವರ್ಷ ವಯಸ್ಸು ಎಂದು ನುಡಿಯುತ್ತಾರೆ. ನಿಮಗೆ 65 ವರ್ಷ ವಯಸ್ಸು ಆಗಿರುತ್ತದೆ ಎನ್ನುವುದಕ್ಕೆ ನೀವು ನ್ಯಾಯಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ, ಎಂದರೆ ಸಾಕ್ಷಿಯು ಹೌದು ಎಂದು ನುಡಿದು ಮುಂದುವರೆದು ಯಾವುದೇ ದಾಖಲೆಯನ್ನು ಕೇಳಿಲ್ಲ ಆದ್ದರಿಂದ ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ.

ನಾನು ಸ.ನಂಃ 97 ರ ಜಮೀನಿಗೆ ಸಂಬಂಧಪಟ್ಟಂತೆ ಸಾಕ್ಷ್ಯನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸದರಿ ಸ.ನಂಃ 97 ರಲ್ಲಿ ಒಟ್ಟು 4 ಎಕರೆ 13 ಗುಂಟೆ ಜಮೀನು ಇರುತ್ತದೆ. ಸದರಿ ಸರ್ವೆ ನಂಬರ್ ನಲ್ಲಿ ಬೇರೆ ಯಾವುದೇ ಜಮೀನು ಇರುವುದಿಲ್ಲ. ಸದರಿ ಸರ್ವೆ ನಂಬರ್ 97 ರ ಜಮೀನಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನಾನು ನೋಡಿರುತ್ತೇನೆ. ಅದರ ಮೂಲ ದಾಖಲೆಗಳನ್ನು ಸಹ ನಾನು ನೋಡಿರುತ್ತೇನೆ. ಸದರಿ ಜಮೀನಿನ ಕೈ ಬರಹದ ಪಹಣಿಯಲ್ಲಿ ದ್ಯಾವಯ್ಯರವರ ಹೆಸರು ಇರುತ್ತದೆ. ಈ ಜಮೀನಿಗೆ ಸಂಬಂಧಪಟ್ಟಂತೆ ಯಾರು ಯಾರಿಗೆ ಪತ್ರ ವ್ಯವಹರಣೆಗಳು ಆಗಿರುತ್ತದೆ ಎಂಬುದನ್ನು ನಾನು ನೋಡಿರುತ್ತೇನೆ. ಸ.ನಂಃ 97 ರ ಜಮೀನಿಗೆ ಸಂಬಂಧಪಟ್ಟಂತೆ ಸಣ್ಣಯ್ಯರವರಿಗೆ ಆಗಿರುವ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ.

ನನ್ನ ಜಮೀನು ಸ.ನಂಃ 43 ರಲ್ಲಿ ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಿಕೆಯಲ್ಲಿ ನನ್ನ ಜಮೀನು ಸ.ನಂಃ 43 ರಲ್ಲಿ ಇರುತ್ತದೆ ಎಂದು ನಾನು ಹೇಳಿ ಬರೆಯಿಸಿರುತ್ತೇನೆ. ಸದರಿ ಸ.ನಂಃ 43 ರಲ್ಲಿ ನನ್ನ ಹೆಸರಿಗೆ 2 ಎಕರೆ ಜಮೀನು ಇರುತ್ತದೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿರುವ ಜಮೀನಿನ ಪಶ್ಚಿಮಕ್ಕೆ ರಸ್ತೆ ಮತ್ತು ಸದರಿ ರಸ್ತೆಯ ನಂತರ ಅದರ ಪಶ್ಚಿಮಕ್ಕೆ ಶಾಲೆ ಇದೆ ಎಂದರೆ ಸಾಕ್ಷಿಯ ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿ ಹೌದು ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸದರಿ ಭಾವಚಿತ್ರವನ್ನು ನಿಶಾನೆಗೊಳಿಸಬೇಕು ಎಂದು ವಾದಿ ಪರ ವಕೀಲರು ಕೇಳಿಕೊಂಡಿದ್ದು ಪ್ರತಿವಾದಿಯ ಪರ ವಕೀಲರು ಸಾಕ್ಷಿಯ ಮೂಲಕ ಸದರಿ ಭಾವಚಿತ್ರವನ್ನು ನಿಶಾನೆಗೊಳಿಸಲು ಬರುವುದಿಲ್ಲ ಅದನ್ನು ನಿಶಾನೆಗೊಳಿಸಲು ತಕರಾರು ಇರುತ್ತದೆ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಭಾವಚಿತ್ರವನ್ನು ತಕರಾರಿಗೆ ಒಳಪಟ್ಟು ನಿಪಿ-12 ಎಂದು ಗುರುತಿಸಲಾಯಿತು. ನಿಪಿ-12 ರಲ್ಲಿರುವ ಮಣ್ಣಿನ ರಸ್ತೆ,

ಪಂಚಾಯಿತಿಯವರು ಮಾಡಿರುವ ರಸ್ತೆ ಎಂದರೆ ಸರಿ. ಸದರಿ ರಸ್ತೆಯು ತರಿಗಳಲೆ ಗ್ರಾಮದ ಪಂಚಾಯಿತಿಯವರು ಮಾಡಿರುವ ರಸ್ತೆಯಾಗಿರುತ್ತದೆ.

ಮುಖ್ಯ ರಸ್ತೆಯ ದಕ್ಷಿಣ ದಿಕ್ಕಿಗೆ 2 ನೇ ವಾದಿ ಮತ್ತು ಅವರ ಕುಟುಂಬದವರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಸದರಿ ಭಾವಚಿತ್ರದಲ್ಲಿರುವ ಮನೆ ವಾದಿಯರ ಮನೆ ಎಂದರೆ ಸಾಕ್ಷಿಯು ಸದರಿ ಭಾವಚಿತ್ರವನ್ನು ನೋಡಿ ಹೌದು ಎಂದು ಒಪ್ಪಿದ ಮೇರೆಗೆ ಸದರಿ ಭಾವಚಿತ್ರವನ್ನು ನಿಪಿ13 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ, ಅದರಲ್ಲಿರುವ ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮ ದಿಕ್ಕಿಗೆ ತಮ್ಮೇಗೌಡರ ಮಗ ಅಣ್ಣೇಗೌಡ ಮತ್ತು ಅವರ ಸಹೋದರರ ಮನೆಯ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿ, ಹೌದು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು.

ವಾದಿಯರ ಜಮೀನಿನ ಉತ್ತರ ದಿಕ್ಕಿಗೆ ಕೊಣನೂರು ಸೋಮವಾರಪೇಟೆಗೆ ಹೋಗುವ ಟಾರು ರಸ್ತೆ ಇದೆ ಎಂದರೆ ಸರಿ. ವಾದಿಯ ಜಮೀನಿನ ಪೂರ್ವಕ್ಕೂ ಕೆರೆಗೆ ಹೋಗುವ ಸರ್ಕಾರಿ ರಸ್ತೆ ಇದೆ ಎಂದರೆ ಸರಿ. ವಾದಿಯ ಜಮೀನಿನ ದಕ್ಷಿಣಕ್ಕೆ ಪ್ರತಿವಾದಿಯ ಸಹೋದರ ಧರ್ಮ ಮತ್ತು ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನಲ್ಲಿ ಕೃಷ್ಣೇಗೌಡರ ಮಗ ರವಮೇಶ ಒಂದು ಆರ್.ಸಿ.ಸಿ. ಮನೆಯನ್ನು ನಿರ್ಮಿಸಿ ಸದರಿ ಮನೆಯ ಕೆಲಸ ಅರ್ಧಕ್ಕೆ ನಿಂತಿರುತ್ತದೆ ಎಂದರೆ ಸಾಕ್ಷಿಯು ಅದು ಪ್ರತಿವಾದಿಯ ಜಮೀನು ಅಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ನಾನು ನನ್ನ ವಕೀಲರ ಬಳಿ ಹೇಳಿ ಬರೆಯಿಸಿರುತ್ತೇನೆ. ವಾದಿಯರ ಜಮೀನಿನಲ್ಲಿ 1 ನೇ ವಾದಿಯ ಮಕ್ಕಳಾದ ಚನ್ನರಾಜು, ಕೃಷ್ಣ, 1 ನೇ ವಾದಿ ಮತ್ತು 1 ನೇ ವಾದಿಯ ಮಗಳ ಗಂಡ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರುಗಳು ಸದರಿ ಜಮೀನಿನ ಪಕ್ಕದಲ್ಲಿರುವ ಕೆರೆಗೆ ಹೋಗುವ ರಸ್ತೆಯ ಪಕ್ಕ ಮನೆಗಳನ್ನು ನಿರ್ಮಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆಗಳನ್ನು ಸಣ್ಣಯ್ಯನವರು ಬದುಕಿದ್ದಾಗ, ಅಂದರೆ ಸುಮಾರು 60 ರಿಂದ 70 ವರ್ಷಗಳಿಂದಲೂ ನಿರ್ಮಿಸಿಕೊಂಡು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ನನಗೆ ತಿಳಿದ ಮಟ್ಟಿಗೆ ಸುಮಾರು 50 ವರ್ಷಗಳಿಂದ ಸದರಿ ಮನೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಮನೆಗಳನ್ನು ನಾನು ಹುಟ್ಟಿದಾಗಿನಿಂದಲೂ ನೋಡುತ್ತಿದ್ದೇನೆ ಎಂದರೆ ಸರಿ. ಸದರಿ ವಾದಿಯರ ಮನೆಯ ಮುಂದೆ ತೆಂಗಿನ ಮರಗಳನ್ನು ನೆಟ್ಟಿರುತ್ತಾರೆ ಮತ್ತು ತಿಪ್ಪೆಯನ್ನು ಕೂಡ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನಲ್ಲಿ ವಾದಿಯರು ಹುಲ್ಲು ಮೆದೆಯನ್ನು ಒಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿರುವ ರಸ್ತೆಯನ್ನು 2018 ನೇ ಸಾಲಿನಲ್ಲಿ ತರಿಗಳಲೆ ಗ್ರಾಮ ಪಂಚಾಯಿತಿಯವರು ಅಣ್ಣೇಗೌಡರ ಮನೆಗೆ ಓಡಾಡಲು ಅನುಕೂಲವಾಗಲಿ ಎಂದು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ರಸ್ತೆಯನ್ನು

ಪಂಚಾಯಿತಿಯವರು ಮಾಡಿರುವುದಿಲ್ಲ, ನಾವೇ ಹಣ ಖರ್ಚು ಮಾಡಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ದೊಡ್ಡಬೊಮ್ಮನಹಳ್ಳಿಯ ಕರ್ಲ್‌ಕಟ್ಟೆ ಕೆರೆಗೆ ಹೋಗುವ ರಸ್ತೆ, ಈ ಹಿಂದೆ ಮಣ್ಣಿನ ರಸ್ತೆ ಆಗಿದ್ದು, ಈಗ ದಾವಾ ಅನುಸೂಚಿ ಸ್ವತ್ತಿನವರೆಗೆ ಕಾಂಕ್ರಿಟ್ ರಸ್ತೆ ಆಗಿರುತ್ತದೆ ಎಂದರೆ ಸರಿ. ಅದು ಈ ಹಿಂದೆ ಓಣಿ ತರಹ ಇತ್ತು ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನ ಉತ್ತರಕ್ಕೆ ಈ ಹಿಂದೆ ಮಣ್ಣಿನ ಓಣಿ ಇತ್ತು, ಈಗ ಸೋಮವಾರಪೇಟೆ, ಬನ್ನೂರು, ಅಬ್ಬೂರಿಗೆ ಹೋಗುವ ಟಾರು ರಸ್ತೆ ಎಂದರೆ ಸಾಕ್ಷಿಯು ಅದು ಸುಮಾರು 70 ವರ್ಷಗಳಿಂದ ಟಾರು ರಸ್ತೆಯಾಗಿತ್ತು ಎಂದು ನುಡಿಯುತ್ತಾರೆ.

ಈ ದಾವೆಯ ಯಾವುದೇ ವಿಚಾರಗಳು ನನಗೆ ತಿಳಿಯದೇ ಇದ್ದರೂ ಕೂಡ ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ನಾನು ರಾಜಕೀಯ ವೈಷಮ್ಯದಿಂದ ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕಿ ನಂತರ ದಾವಾ ಅನುಸೂಚಿ ಸ್ವತ್ತು ಪಾಳು ಬಿದ್ದಿದ್ದೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸ್ವತ್ತಿನ 1970 ರಿಂದ 1973 ರವರೆಗಿನ ಕೈ ಬರಹದ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ಸದರಿ ಪಹಣಿ ಪತ್ರಿಕೆಯಲ್ಲಿ ಗುಂಡಯ್ಯ, ಈರಯ್ಯ ಎಂದು ಇರುತ್ತದೆ, ಅದನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಆ ಸಮಯದಲ್ಲಿಹುಟ್ಟಿರಲಿಲ್ಲ ಅದ್ದರಿಂದ ನಾನು ಅದನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟ 1970-71 ರಿಂದ 1972-73 ರ ರವರೆಗಿನ ಪಹಣಿ ಪತ್ರಿಕೆಗಳನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಸುಮಾರು 50 ವರ್ಷಗಳಿಂದ ಈಚೇಗಿನ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ದಾವೆಯ ಯಾವುದೇ ವಿಚಾರಗಳು ತಿಳಿಯದೇ ಇದ್ದರೂ ಕೂಡ ಪ್ರತಿವಾದಿ ಒತ್ತಾಯ ಮಾಡಿದ್ದರಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟ 50 ವರ್ಷಗಳ ಹಿಂದಿನ ದಾಖಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿ.
(ಮರು ವಿಚಾರಣೆ ಇಲ್ಲ )

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**